**‘ನಾನು ಮನೆಯಿಂದ ಹೊರಟು ಹೋಗುತ್ತಿದ್ದೇನೆ. ನನ್ನನ್ನು ಹುಡುಕುವ ಪ್ರಯತ್ನ ಮಾಡಬೇಡ...’ ಎಂದಷ್ಟೇ ಬರೆದಿಟ್ಟು ಹೋಗಿರುವುದರಿಂದಲೇ ಮಕ್ಕಳಿಗೆ ಸಮಾಧಾನ ಹೇಳಲು, ಧೈರ್ಯ ತುಂಬಲು ನನ್ನಿಂದ ಸಾಧ್ಯವಿದೆಯೇ..? ಏನೆಂದು ಮಕ್ಕಳಿಗೆ ತಿಳಿದಿಲ್ಲ, ತಿಳಿಯುವುದೂ ಬೇಡ’**



ಒಂದು ವರ್ಷದವರೆಗೆ ಇರಿಸಿಕೊಂಡಿದ್ದರು. ಅದೇ ದಿನಗಳಲ್ಲಿ ನಾನು ಅನಾರೋಗ್ಯದಿಂದ ಸಫ್ದರ್‌ಜಂಗ್ ಆಸ್ಪತ್ರೆಗೆ ಸೇರಿದ್ದೆ. ಆಗ ಗಂಡ–ಹೆಂಡತಿ ಇಬ್ಬರೂ ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರು. ಅದಾದ ಬಳಿಕ ನನ್ನ ಅಮ್ಮ ಬಂದಿದ್ದರು. ಈಗ ನೀವೇ ಯೋಚಿಸಿ... ಈ ಮಹಾನಗರದಲ್ಲಿ...! ನೀವು ಅವರ ಬಗ್ಗೆ ಸಾಂಕೇತಿಕವಾಗಿ ಹೇಳಿದಾಗ, ‘ಇಂದಿನ ಕಾಲಮಾನದಲ್ಲಿ ಯಾರೂ ಸಹ ಸುಖಾಸುಮ್ಮನೆ ಬೇರೆಯವರಿಗೆ ಸಹಾಯ ಮಾಡುವುದಿಲ್ಲ’ ಎಂದು ನಾನು ಖಂಡಿತವಾಗಿಯೂ ಹೇಳಿದ್ದೆ. ಇದು ವಾಸ್ತವ ತಾನೆ...!

ನೀವು ನಿಮ್ಮನ್ನು ಬಹಳ ಸಂಭಾವಿತರು ಎಂದು ಸಾಬೀತುಪಡಿಸಿಕೊಳ್ಳುತ್ತೀರಿ. ವಿವಾಹಪೂರ್ವ ಅನೈತಿಕ ಸಂಬಂಧಗಳು ತಪ್ಪೇನಲ್ಲ ಎಂಬ ನಿಮ್ಮ ದೃಷ್ಟಿಕೋನ ಸ್ಪಷ್ಟವಾಗಿಯೇ ಇತ್ತು. ಆದರೆ ನನ್ನ ಮತ್ತು ಅವರ ಸಂಬಂಧದ ಬಗ್ಗೆ ನಿಮಗೆ ಅರಿವಾದಾಗ...?

ಅವರು ನನ್ನ ಕಚೇರಿಯಲ್ಲಿಯೂ ನನ್ನನ್ನು ಭೇಟಿಯಾಗಬಾರದು ಎಂಬುದು ನಿಮ್ಮ ಒತ್ತಾಯವಾಗಿತ್ತು. ನನ್ನ ಕಚೇರಿಯ ನಿರ್ದೇಶಕರು ಅವರ ಮಿತ್ರರಾಗಿದ್ದರು. ಹಾಗಾಗಿ ಅವರನ್ನು ಕಾರ್ಯಕ್ರಮಗಳಿಗೆ ಆಹ್ವಾನಿಸುತ್ತಿದ್ದರು. ಅದೇ ನಿರ್ದೇಶಕರ ಸಹಾಯದಿಂದ ಅವರು ನನಗೆ ನೌಕರಿ ಕೊಡಿಸಿದ್ದರು. ಮೂರು ವರ್ಷ ಅಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡಿದ ಮೇಲೆ ಒಂದು ದೈನಿಕ ಸಮಾಚಾರ ಪತ್ರಿಕೆಯಲ್ಲಿ ಪ್ರಕಟವಾದ ಜಾಹೀರಾತಿನ ಆಧಾರದ ಮೇಲೆ ನನಗೆ ಖಾಯಂ ನೌಕರಿ ದೊರೆತಿತ್ತು. ಅದರಲ್ಲಿ ನಾನು ಪ್ರೋಗ್ರಾಂ ಎಕ್ಸಿಕ್ಯೂಟೀವ್ ಆಗಿದ್ದೆ. ಅದರ ಪ್ಯಾನಲ್‌ನಲ್ಲಿ ಅವರ ಹೆಸರಿತ್ತು. ಹಾಗಾಗಿ ಪ್ರತಿ ಎರಡು ಮೂರು ತಿಂಗಳಿಗೊಮ್ಮೆ ಅವರನ್ನು ಆಹ್ವಾನಿಸಬೇಕೆಂದು ನಿರ್ದೇಶಕರು ನನಗೆ ತಿಳಿಸಿದ್ದರು. ಅಂತಹ ಪರಿಸ್ಥಿತಿಯಲ್ಲಿ ಅವರನ್ನು ಭೇಟಿಯಾಗಬಾರದು ಮತ್ತು ಪ್ಯಾನಲ್‌ನಿಂದ ಅವರ ಹೆಸರನ್ನು ಕೈಬಿಡಬೇಕೆಂಬ ನಿಮ್ಮ ಸೂಚನೆಯನ್ನು ನಾನು ನನ್ನ ನಿರ್ದೇಶಕರಿಗೆ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ. ಅವರ ಎಲ್ಲಾ ಕಾರ್ಯಕ್ರಮಗಳ ರೂಪುರೇಷೆಯನ್ನು ತಯಾರು ಮಾಡುವ ಜವಾಬ್ದಾರಿ ನನ್ನ ಮೇಲೆಯೇ ಇತ್ತು. ಅಂದಮೇಲೆ ಅವರನ್ನು ಭೇಟಿಯಾಗದಿರಲು ಹೇಗೆ ತಾನೇ ಸಾಧ್ಯವಾಗುತ್ತಿತ್ತು? ನೌಕರಿಯನ್ನೇ ಬಿಟ್ಟುಬಿಡು ಎಂದು ನೀವು ಹೇಳಿದ್ದಿರಿ. ಆದರೆ ನನಗೆ ಅದು ಸರಿಕಾಣಿಸಲಿಲ್ಲ. ಈ ಮಹಾನಗರದಲ್ಲಿ ಒಬ್ಬ ಸ್ವತಂತ್ರ ಲೇಖಕನಾಗಿ, ಅದರಿಂದಲೇ ಕುಟುಂಬದ ಎಲ್ಲಾ ಜವಾಬ್ದಾರಿಗಳನ್ನು ಸರಿದೂಗಿಸಿಕೊಂಡು ಹೋಗಲು ನಿಮ್ಮಿಂದ ಸಾಧ್ಯವಿತ್ತೆ? ಮಕ್ಕಳನ್ನು ಸಾರ್ವಜನಿಕ ಶಾಲೆಯಲ್ಲಿ ಓದಿಸಬೇಕಾಗಿತ್ತೆ? ನೌಕರಿ ನಮ್ಮ ಆದ್ಯತೆಯಾಗಿತ್ತು ವಿಫುಲ್... ಮತ್ತು ನೌಕರಿಯ ಸಂದರ್ಭಗಳಲ್ಲಿ ಅವರನ್ನು ಭೇಟಿಯಾಗುವುದು ನನ್ನ ಅನಿವಾರ್ಯತೆಯಾಗಿತ್ತು ಕೂಡ. ನೀವು ಆಗ ಕೇಳಿದ್ದಿದ್ದರೆ ನಾವು ಎಲ್ಲವನ್ನು ವಿಶದವಾಗಿ ಹೇಳಿಬಿಡುತ್ತಿದ್ದೆ. ಈ ಹೊತ್ತಿಗೆ ಅದೆಲ್ಲವೂ ಗತಕಾಲದಲ್ಲಿ ಹುದುಗಿಹೋಗಿಬಿಡುತ್ತಿತ್ತು. ಆದರೆ ನನ್ನ ಮತ್ತು ಅವರ ಸಂಬಂಧ ಕುರಿತಂತೆ ನೀವು ಉದಾರತೆಯ ಮುಸುಕಿನಡಿಯಲ್ಲೇ ನಾಟಕವಾಡುತ್ತ ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಸಂಪ್ರದಾಯ, ರೂಢಿ, ಪದ್ಧತಿಯ ಕೆಸರಿನಲ್ಲಿ ಹೂತುಹೋಗಿದ್ದಿರಿ.

ಒಬ್ಬ ಪುರುಷ ಎಷ್ಟೇ ಕಾನೂನುಬಾಹಿರ ಸಂಬಂಧಗಳನ್ನು ಹೊಂದಿದ್ದರೂ ತನ್ನನ್ನು ತಾನು ಶುದ್ಧ, ಪ್ರಾಮಾಣಿಕ ಎಂದು ಸಾಬೀತುಪಡಿಸಿಕೊಳ್ಳುತ್ತಾನೆ. ಆದರೆ ಮಹಿಳೆಯ ಸಂಬಂಧಗಳು ಸಹ್ಯವಾಗುವುದೇ ಇಲ್ಲ. ಇದೆಂತಹ ವಿಡಂಬನೆ...! ಎಂತಹ ಇಬ್ಬಗೆಯ ಮಾನದಂಡ...! ಸಮಾಜಸೇವೆಯ ಹೆಸರಿನಲ್ಲಿಯೂ ಡೋಂಗಿತನ